ಶ್ರೀ ಜೆ.ಟಿ.ಪಾಟೀಲ್:- ತಾವು ಈ ಬಗ್ಗೆ ಯಾವ ಯೋಜನೆಯನ್ನು ಹಾಕಿಕೊಂಡಿದ್ದೀರಿ ಎಂಬುದನ್ನು ಸ್ಪಷ್ಟವಾಗಿ ತಿಳಿಸಿದರೆ ಅನುಕೂಲವಾಗುತ್ತದೆ. ಇದನ್ನು ತಾವು ಕೇಂದ್ರ ಸರ್ಕಾರಕ್ಕೆ ಕಳುಹಿಸುವಂತಹ ಅವಶ್ಯಕತೆ ಇಲ್ಲ. ರಾಜ್ಯಸರ್ಕಾರದವರು ಇದಕ್ಕೆ ಸ್ವಲ್ಪ ಹಣಕಾಸನ್ನು ಖರ್ಚುಮಾಡಿದರೆ ಸಾಕು. ಇವತ್ತು ಯಡಹಳ್ಳಿ ಗ್ರಾಮದ ಗುಡ್ಡದಲ್ಲಿ ಹತ್ತಾರು ಸಾವಿರ ನವಿಲುಗಳಿವೆ. ಹೊರರಾಜ್ಯಗಳಿಂದ ಬೇರೆ ಬೇರೆ ಜಾತಿಯ ಪಕ್ಷಿಗಳು ಅಲ್ಲಿಗೆ ವಲಸೆ ಬರುತ್ತಿವೆ. ಅದಕ್ಕಾಗಿ ಸರ್ಕಾರದವರು ಉತ್ತಮವಾದ ಆ ಗುಡ್ಡವನ್ನು ಸಂರಕ್ಷಣೆ ಮಾಡದೆ ಹೋದರೆ ಆ ಪಕ್ಷಿಗಳಿಗೆ ದುಷ್ಪರಿಣಾಮ ಆಗುವಂತ ಪರಿಸ್ಥಿತಿ ಇದೆ. ಈ ಬಗ್ಗೆ ದಯಮಾಡಿ ನಮಗೆ ಸ್ಪಷ್ಟವಾದ ಉತ್ತರವನ್ನು ತಿಳಿಸಬೇಕು.

ಶ್ರೀ ಎಚ್.ವೈ.ಮೇಟಿ:- ಈಗಾಗಲೇ ನಾವು ಅಲ್ಲಿರುವಂಥ ಪಕ್ಷಿಗಳಿಗೆ ಕೊರತೆಯಾಗದಂತೆ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಅದನ್ನು ನಾವು ವನ್ಯಜೀವಿ ಕಾಯಿದೆ ಪ್ರಕಾರ 'ವನ್ಯಧಾಮ' ಮಾಡಬೇಕಾದರೆ ಕೇಂದ್ರಸರ್ಕಾರದ ಪರವಾನಿಗೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದರ ಸಲುವಾಗಿ ನಾವು ಯೋಜನೆಯನ್ನು ತೀವ್ರಗತಿಯಲ್ಲಿ ತಯಾರಿಸಿ ಕೇಂದ್ರಸರ್ಕಾರಕ್ಕೆ ಕಳುಹಿಸುವ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ತಮ್ಮ ಮೂಲಕ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಜೆ.ಟಿ.ಪಾಟೀಲ್:- ನೀವು ಆ ಯೋಜನೆಗೆ ಕೇಂದ್ರಸರ್ಕಾರದ ಮಂಜೂರಾತಿಯನ್ನು ತೆಗೆದುಕೊಂಡು ಕಾರ್ಯಕ್ರಮವನ್ನು ಹಾಕಿಕೊಳ್ಳಿ. ಅದರಲ್ಲಿ ನಮ್ಮದೇನು ತಕರಾರು ಇಲ್ಲ. ಆದರೆ ನೀವು ತ್ವರಿತವಾಗಿ ತಾತ್ಕಾಲಿಕವಾಗಿಯೆನಾದರು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆಯೆ, ಸಾಧ್ಯ ಇದ್ದರೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ಇದನ್ನು ತಾವು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎಚ್.ವೈ.ಮೇಟಿ:- ಸಧ್ಯದಲ್ಲೆ ಅದರ ಬಗ್ಗೆ ಯಾವುದಾದರೊಂದು ಕಾರ್ಯಕ್ರಮವನ್ನು ಹಾಕಿಕೊಂಡು ಅಲ್ಲಿ ಪಕ್ಷಿಗಳಿಗೆ ಏನೂ ಹಾನಿಯಾಗದಂತೆ ನೋಡಿಕೊಂಡು ಅದನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ.ಬಿ.ಚಿಮ್ಮನಕಟ್ಟೆ:- ಮಾನ್ಯ ಅಧ್ಯಕ್ಷರೆ, ಈಗೇನು ನವಿಲುಗಳ ಯೋಜನೆಗೆ ಏನು ಪ್ರಸ್ತಾಪ ಮಾಡಿದ್ದಾರೆ. ಅದರ ಜೊತೆಗೆ ಯಡಹಳ್ಳಿ ಮತ್ತು ಜೀಳಗಿ ತಾಲ್ಲೂಕಿನಲ್ಲಿ ಅಂಟು ಬಹಳ ಪ್ರಸಿದ್ಧಿಯಾಗಿದೆ. ತಮ್ಮ ಇಲಾಖೆಯವರೆ ಈಗಾಗಲೆ ಹರಾಜು ಮಾಡಿದ್ದಾರೆ. ಬೇರೆ ಬೇರೆ ಜಿಲ್ಲೆಗಳಿಗೆ, ಬೇರೆ ಬೇರೆ ರಾಜ್ಯಗಳಿಗೆ ಅಂಟನ್ನು ಕಳುಹಿಸಿಕೊಡತಕ್ಕಂಥ ವ್ಯವಸ್ಥೆಯೂ ಇದೆ. ಅದನ್ನು ಅಭಿವೃದ್ಧಿಪಡಿಸುವತ್ತ ಸರ್ಕಾರದವರು ಏನಾದರು ವಿಚಾರ ಮಾಡಿದ್ದಾರೆಯೆ ಹೇಗೆ? ಬಹಳ ದೊಡ್ಡ ಪ್ರಮಾಣದಲ್ಲಿ ರಾಜ್ಯಕ್ಕೆ ಲಾಭ ಆಗತಕ್ಕಂಥ ಒಂದು ಯೋಜನೆಯನ್ನು ಸಿದ್ಧಪಡಿಸುತ್ತೀರಾ ಹೇಗೆ?

ಅಧ್ಯಕ್ಷರು:- ನೀವೆಲ್ಲರೂ ಒಂದೇ ಜಿಲ್ಲೆಯವರು. ನೀವು ಜಗದೀಶ್ ಪಾಟೀಲರು, ಚಿಮ್ಮನಕಟ್ಟೆ ಎಲ್ಲರು ಕುಳಿತು ಮಾತನಾಡಿ ವಿಸ್ತೃತವಾದ ಒಂದು ಯೋಜನೆಯನ್ನು ಹಮ್ಮಿಕೊಳ್ಳಿ.

ಶ್ರೀ ಎಚ್.ವೈ.ಮೇಟಿ:-ಆ ಬಗ್ಗೆ ಸರ್ಕಾರದಲ್ಲೇನು ಪ್ರಸ್ತಾವನೆ ಇಲ್ಲ, ಮುಂದೆ ಏನಾದರೂ ಬಂದರೆ ನೋಡೋಣ.

ವಿಷಯ:- ಎಂ.ಎ.ಜಿ.ಕಾಲೇಜಿನ ಶಿಕ್ಷಕರು ಹಾಗೂ ಶಿಕ್ಷಕೇತರರ ವಜಾ

ಚುಕ್ಕೆ ಗುರುತಿನ ಪ್ರಶ್ನೆ :236 (2289)

ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಎಂ.ಪಿ.ಜಿ. ಇಂಜಿನಿಯರಿಂಗ್ ಕಾಲೇಜು ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುತ್ತದೆಯೇ?

ಆ) ಹಾಗಿದ್ದಲ್ಲಿ, ಬೆಂಗಳೂರು ವಿಶ್ವವಿದ್ಯಾಲಯ ಈ ಕಾಲೇಜಿಗೆ ಮಾನ್ಯತೆ ನೀಡಿದೆಯೇ?

ಇ) ಈ ಕಾಲೇಜಿನಲ್ಲಿ ಕಳೆದ 4-5- ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದು, ಸುಮಾರು 110 ಜನ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿಯನ್ನು ವಜಾ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು ಹಾಗೂ ಸರ್ಕಾರ ಈ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿಗೆ ನ್ಯಾಯ ದೊರಕಿಸಿಕೊಡಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು):-

ಅ) ಹೌದು

ಆ) ಹೌದು

ಇ) ಹೌದು

ಈ) ಅವರುಗಳ ನೇಮಕಾತಿಯು ತಾತ್ಕಾಲಿಕ: ಗುತ್ತಿಗೆ ಸ್ವರೂಪದ್ದಾಗಿದ್ದರಿಂದ ಆಡಳಿತ ಮಂಡಳಿಯು ಅವರುಗಳನ್ನು ಸೇವೆಯಿಂದ ತೆಗೆದುಹಾಕಿದೆ. ಇದೊಂದು ಅನುದಾನರಹಿತ ಮತೀಯ ಅಲ್ಪಸಂಖ್ಯಾತ ಖಾಸಗೀ ಕಾಲೇಜು ಆಗಿರುವುದರಿಂದ ಸರ್ಕಾರ ದೃಶ್ಯಕ್ಕೆ ಬರುವುದಿಲ್ಲ. ಬಾಧಿತರಾದ ನೌಕರರು ಸಮುಚಿತ ವೇದಿಕೆಯಿಂದ ಪರಿಹಾರ ಪಡೆಯಬಹುದು.

ಶ್ರೀ ಎಸ್.ಸುರೇಶ್ ಕುಮಾರ್ (ಮಾನ್ಯ ರಾಮಲಿಂಗಾರೆಡ್ಡಿಯವರ ಪರವಾಗಿ):- ಮಾನ್ಯ ಅಧ್ಯಕ್ಷರೆ, ಅವರು ಕಳುಹಿಸಿರುವ ಉತ್ತರದಲ್ಲಿ ಎಂ.ವಿ.ಜಿ.ಇಂಜಿನಿಯರಿಂಗ್ ಕಾಲೇಜು ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುತ್ತದೆ ಹೌದು, ಹೌದು ಎಂದು ಹೇಳಿ, ಕೊನೆಗೆ ಇವರು ಕನ್ನಡದಲ್ಲಿ ಇದು ಮತೀಯ ಅಲ್ಪಸಂಖ್ಯಾತ ಖಾಸಗಿ ಕಾಲೇಜು ಎಂದು ಹೇಳಿದ್ದಾರೆ. ಇಂಗ್ಲಿಷ್‌ನಲ್ಲಿ It is a Linguistic Minority private college ಎಂದು ಹೇಳಿದ್ದಾರೆ. ಅದು ಯಾವುದು ಎಂದು ಅವರು ಉತ್ತರವನ್ನು ಕೊಡಲಿ, ಇದು ಮೊದಲನೆಯದು. ಇನ್ನು ಎರಡನೆಯದು, ಭಾಷಾ ಅಲ್ಪಸಂಖ್ಯಾತ ಸಂಸ್ಥೆಯ ಹೆಸರಿನಲ್ಲಿ ಕರ್ನಾಟಕದ ಉಪಾಧ್ಯಾಯರ ಮೇಲೆ ನಿರಂತರವಾಗಿ ಏನೊಂದು ಆಕ್ರಮಣ ನಡೆಯುತ್ತಿದೆ, ಕಿರುಕುಳ ನಡೆಯುತ್ತಿದೆ, ಅದಕ್ಕೆ ಇದು ಒಂದು ತಾಜಾ ಉದಾಹರಣೆ. ಸಭಾಧ್ಯಕ್ಷರೆ, ಕಳೆದ 13 ವರ್ಷಗಳಿಂದ ಈ ಕಾಲೇಜು ಅಸ್ತಿತ್ವದಲ್ಲಿದೆ. ಇದು 13 ವರ್ಷಗಳಿಂದಲೂ ಅಸ್ತಿತ್ವದಲ್ಲಿದ್ದು ಈಗಲೂ ಕೂಡ ಇಲ್ಲಿನ ಶಿಕ್ಷಕರು ಶಿಕ್ಷಕೇತರರು ಹಂಗಾಮಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದು ಅವರು ಹೇಳಿಕೆ ಕೊಡುತ್ತಾರೆ. ಅವರನ್ನು ಕೆಲಸದಿಂದ ತೆಗೆದುಹಾಕುತ್ತಾರೆ. ವಿಶ್ವವಿದ್ಯಾನಿಲಯದ ಸ್ಥಳೀಯ ತನಿಖಾ ಸಮಿತಿಗಳಿಗೆ ಅವರು ಲಿಖಿತ ಮೂಲಕವಾಗಿ ನಮ್ಮಲ್ಲಿರುವ ಶಿಕ್ಷಕರು ಮತ್ತು ಶಿಕ್ಷಕೇತರರು ಖಾಯಂ ಎಂದು ಕೊಟ್ಟಿದ್ದಾರೆ. ಸಮಿತಿಗೆ ವರದಿ

ಕೊಡುವುದು ನಮ್ಮಲ್ಲಿ ಖಾಯಂ ಎಂದು. ಆದರೆ ತೆಗೆದು ಹಾಕುವುದು ನಮ್ಮಲ್ಲಿರುವವರು ತಾತ್ಕಾಲಿಕ ಎಂದು. 13 ವರ್ಷದಿಂದ 17 ಜನ ಪ್ರಾಂಶುಪಾಲರುಗಳನ್ನು ಇವರು ಇದೇ ಹೆಸರಿನಲ್ಲಿ ಟ್ರಾನ್ಸ್‌ಫರ್ ಮಾಡಿದ್ದಾರೆ. ಕೇವಲ ಸಹಿ ಮಾಡುವುದಕ್ಕೋಸ್ಕರ 17 ಜನರನ್ನು ಇಟ್ಟುಕೊಂಡಿದ್ದರು. ಐದುನೂರು ಜನ ಶಿಕ್ಷಕರು ಇವರ ಕಿರುಕುಳದಿಂದ, ಹಿಂಸೆಗೆ ಒಳಗಾಗಿ ಇವತ್ತು ಬೀದಿಗೆ ಬಂದಿದ್ದಾರೆ. ಒಂದು ವರ್ಷದ ಹಿಂದೆ ಬೆಂಗಳೂರು ವಿಶ್ವವಿದ್ಯಾಲಯ ಈ ಕಾಲೇಜನ್ನು ಡಿಸ್‌ಆಫಿಲಿಯೇಟ್- ಮಾಡಿತ್ತು. ಡಿಸ್‌ಆಫಿಲಿಯೇಟ್ ಮಾಡಿದ್ದರೂ ಕೂಡ ಸರ್ಕಾರ ಇದರ ಬಗ್ಗೆ ಚಕಾರ ಎತ್ತದೆ ಇರುವುದಕ್ಕೆ ಕಾರಣ ಏನು? ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಗುಲಾಮರಂತೆ ಕಾಣುತ್ತಾ, ಶಿಕ್ಷಕರನ್ನು ಹಿಂಸೆ ಮಾಡುತ್ತಿದೆಯಲ್ಲ ಈ ಕಾಲೇಜು, ಈ ಕಾಲೇಜು ಬಗ್ಗೆ ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಡಿ.ಮಂಜುನಾಥ್:- ಮಾನ್ಯ ಅಧ್ಯಕ್ಷರೆ, ಇದರಲ್ಲಿ 110 ಟೀಚಿಂಗ್ ಅಂಡ್ ನಾನ್ ಟೀಚಿಂಗ್ ಎಂದು ಹೇಳಿದ್ದಾರೆ. ಇದರಲ್ಲಿ 23 ಜನ ಟೀಚರ್ಸ್, ನಾನ್ ಟೀಚಿಂಗ್ ಐದು ಜನ ಇದ್ದಾರೆ. ಅದರ ಜೊತೆಗೆ ಈಗ ಏನಾಗಿದೆ ಎಂದರೆ ಲಿಂಗ್ವಿಸ್ಟಿಕ್ ಮೈನಾರಿಟೀಸ್ ಅವರು ಆ ಇನ್‌ಸ್ಟಿಟ್ಯೂಷನ್‌ಗೆ ಕೊಟ್ಟುಬಿಟ್ಟಿದ್ದಾರೆ. ಇಲ್ಲಿ ಏನಾಗಿದೆ ಎಂದರೆ ಈಗ ಬೆಂಗಳೂರು ವಿಶ್ವವಿದ್ಯಾಲಯ ಡಿಸ್‌ಆಫಿಲಿಯೇಟ್ ಮಾಡಬೇಕು ಎಂದು ಶಿಫಾರಸ್ಸು ಮಾಡಿದಮೇಲೆ ಅವರು ಹೈಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡಿದ್ದಾರೆ. ಅದು ಹೈಕೋರ್ಟಿನಲ್ಲಿ ಕೇಸ್ ಪೆಂಡಿಂಗ್ ಇದೆ. ಆಮೇಲೆ ಈ ನೌಕರರು ಸಹ ಟ್ರಿಬ್ಯುನಲ್‌ಗೆ ಅರ್ಜಿ ಹಾಕಿದ್ದಾರೆ. ಟ್ರಿಬ್ಯುನಲ್ ಕೇಸ್ ಇದೆ, ಅದು ಪೆಂಡಿಂಗ್ ಇದೆ, ಅದಕ್ಕೋಸ್ಕರವೆ ಈ ಕೇಸ್ ತಿರ್ಮಾನ ಆದಮೇಲೆ ಸರ್ಕಾರ ಏನಾದರೂ ಮಾಡಬಹುದೆ ಹೊರತು ಈಗೇನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಸುರೇಶ್‌ಕುಮಾರ್‌ರವರು ಕೇಳುವುದರಲ್ಲಿ ಅರ್ಥ ಇದೆ. ಈಗ ಲಿಂಗ್ವಿಸ್ಟಿಕ್ ಮೈನಾರಿಟೀಸ್ ಎಂದು ಹೇಳಿ ತೆಲುಗು ಕಾಲೇಜಿನಲ್ಲಿ, ತೆಲುಗು ಭಾಷೆ ಮಾತನಾಡತಕ್ಕಂತಹವರು, ಅವರು ಕನ್ನಡ ಸ್ಕೂಲ್ ನಡೆಸಿದರೂ ಕೂಡ, ಮತ್ತೆ ಬೇರೆ ಸ್ಕೂಲ್ ನಡೆಸಿದರೂ ಕೂಡ ಅವರಿಗೆ ಏನಾಯಿತಿ ಕೊಡುತ್ತೇವೆ. ತಮಿಳಿನವರೂ ಕೂಡ ಕನ್ನಡ ಸ್ಕೂಲ್ ಅಥವಾ ಬೇರೆ ಪ್ರೊಫೆಷನಲ್ ಕಾಲೇಜ್ ನಡೆಸಿದರೆ ಅವರಿಗೂ ಕೂಡ ಏನಾಯಿತಿ ಕೊಡುತ್ತೇವೆ. ಹೀಗಾಗಿ ಏನಾಗಿದೆಯೆಂದರೆ, ಇಡೀ ಬೆಂಗಳೂರಿನಲ್ಲಿ ಶೇಕಡಾ 80 ರಷ್ಟು ಅವರು ಏನಾಯಿತಿಯೊಳಗೆ ಬರುತ್ತಾರೆ. ಮತ್ತು ಕನ್ನಡಿಗರು ಶೇಕಡ 20 ರಷ್ಟು ಮಾತ್ರ ಬರುತ್ತಾರೆ. ಆದ್ದರಿಂದ ಇವರೆ ಮೈನಾರಿಟಿ ಆಗುತ್ತಾರೆ. ಇವರಿಗೇ ಏನಾಯಿತಿಯನ್ನು ಕೊಟ್ಟುಬಿಡಿ ಹೋಗಲಿ. ಅವರು ಆಮೇಲೆ ಜನರಲ್ ಆಗಿಬಿಡುತ್ತಾರೆ. ಒಂದು ಪಕ್ಷ ಆ ಜನರಲ್ ರೂಲ್ ಆದರೂ ಅಪ್ಲಿಕಬಲ್ ಆಗಲಿ. ಹೀಗಾಗಿ ಏನಾಗಿದೆಯೆಂದರೆ, ಯಾವ ಕಾಲೇಜಿನಲ್ಲೂ ಅಡ್ಮಿಷನ್ ಸಿಗುವುದಿಲ್ಲ. ಇಂಜಿನಿಯರಿಂಗ್ ಕಾಲೇಜಿಗೆ ಹೋಗಿರಿ ಒಬ್ಬರು ತಮಿಳು ಕಾಲೇಜು ಎಂದು ಹೇಳಿ ಏನಾಯಿತಿ ತೆಗೆದುಕೊಳ್ಳುತ್ತಾರೆ. ಒಬ್ಬರು ತೆಲುಗು ಅಂತ ತೆಗೆದುಕೊಳ್ಳುತ್ತಾರೆ ಒಬ್ಬರು ಕೊಂಕಣಿ ಅಂತ ತೆಗೆದುಕೊಳ್ಳುತ್ತಾರೆ, ಒಬ್ಬರು ರಿಲಿಜಿಯಸ್ ಮೈನಾರಿಟೀಸ್ ಅಂತ ತೆಗೆದುಕೊಳ್ಳುತ್ತಾರೆ. ಅದಕ್ಕೆ ನೀವು ಏನಾದರೂ ಒಂದು ಆಪ್‌ಲೀಸ್ಟ್ ಈ ಶಿಕ್ಷಣದಲ್ಲಾದರೂ ಒಂದು ನಿರ್ದಿಷ್ಟವಾದಂಥ ಪಾಲಿಸಿಯನ್ನು ಅಡಾಪ್ಟ್ ಮಾಡಿಕೊಳ್ಳಿ, ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಅನೇಕ ಹುಡುಗರಿಗೆ ಪ್ರವೇಶ ಸಿಗುವುದಿಲ್ಲ. ನೀವು ಏರಿಯಾ ನೋಡಿ ಒಂದು ಕಾಲೇಜ್ ಮಾಡುತ್ತೀರಿ.

ವಿಜಯನಗರಕ್ಕೆ ಒಂದು ಕಾಲೇಜ್ ಕೊಡುತ್ತೀರಿ, ಮತ್ತೆ ಇನ್ನೊಬ್ಬರು ಅರ್ಜಿಯನ್ನು ಕೊಟ್ಟರೆ ಅಲ್ಲಿ ಕೊಡುವುದಿಲ್ಲ ಏಕೆಂದರೆ ಈಗಾಗಲೇ ಅಲ್ಲಿ ಒಂದು ಕಾಲೇಜು ಇದೆಯೆಂದು ಹೇಳಿ ಇನ್ನೊಂದು ಕಾಲೇಜಿಗೆ ಅವಕಾಶ ಕೊಡುವುದಿಲ್ಲ. ಅದೇರೀತಿಯಾಗಿ ವಿರಿಯಾ ನೋಡಿ ಮಕ್ಕಳ ಸ್ಟ್ರೆಂತ್ ಆಧಾರದ ಮೇಲೆ ನೀವು ಕಾಲೇಜ್ ಕೊಡುವಾಗ ಮತ್ತು ಬೇರೆ ಮಕ್ಕಳಿಗೆ ಪ್ರವೇಶ ಸಿಗಲಿಲ್ಲ. ಮತ್ತು ಟೀಚಿರ್ ಪ್ರಶ್ನೆ ಬಂದಾಗ ರೋಸ್ಟರ್ ಪ್ರಶ್ನೆ - ಈ ರೀತಿಯ ಅನೇಕ ವಿಷಯಗಳು ಬರುತ್ತವೆ. ಅದಕ್ಕೆ ದಯವಿಟ್ಟು ಏನಾದರು ಒಂದು ಕಾಮನ್ ಪಾಲಿಸಿಯನ್ನು ಮಾಡಬೇಕೆಂದು ಹೇಳಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಮಂಜುನಾಥ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಖರ್ಗೆಯವರು ಹೇಳಿದ ಪ್ರಕಾರ ಬಹಳ ಜನಕ್ಕೆ ತೊಂದರೆಯಾಗಿದೆ ಎಂದು ನನಗೂ ಸಹ ಅನಿಸಿದೆ. ಅದಕ್ಕೆ ಏನಾದರೂ ಪಾಲಿಸಿ ಮಾಡುತ್ತೀರಾ ಎಂದು ಮಾನ್ಯ ಖರ್ಗೆಯವರು ಕೇಳುತ್ತಿದ್ದಾರೆ. ಅದರ ಬಗ್ಗೆ ಯೋಚನೆ ಮಾಡುತ್ತೇವೆ. ಇತ್ತೀಚೆಗೆ ಸಮಗ್ರ ಶಿಕ್ಷಣ ಮಾಸೂದೆ ಬೇರೆ ಜಾರಿಗೆ ಬಂದಿದೆ. ಅದರಲ್ಲಿ ಈ ವಿಷಯವೂ ಬರುತ್ತದೆ. ಅದಕ್ಕೋಸ್ಕರ, ಏನಾಗಿದೆ ಎಂದು ಈ ಕಾಲೇಜು ಬಗ್ಗೆ ಹೇಳುವುದಾದರೆ, ಹಿಂದೆಯೇ ಇದನ್ನು ಭಾಷಾ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆ ಎಂದು ಮಾಡಲಾಗಿದೆ.

ಶ್ರೀ ವಾಟಾಳ್ ನಾಗರಾಜ್:- ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಹೆಸರಿನಲ್ಲಿ ಕನ್ನಡಿಗರಿಗೆ ಹೊಡೆತ ಬಿದ್ದಿದೆ. ಕನ್ನಡ ಶಾಲೆಗಳನ್ನು ನಡೆಸತಕ್ಕ ಕನ್ನಡ ಜನರಿಗೆ ಇವತ್ತು ಹೊಡೆತ ಬಿದ್ದಿದೆ. ಇದು ಇವತ್ತು ಬಹಳ ಅಪಾಯಕಾರಿಯಾದ ಸ್ಥಿತಿಯಲ್ಲಿ ಇದೆ. ಕೇವಲ ಬೆಂಗಳೂರಿನಲ್ಲಿ ಮಾತ್ರವಲ್ಲ, ಇಡೀ ಕರ್ನಾಟಕದಲ್ಲಿ ಈ ರೀತಿ ಅಪಾಯಕಾರಿ ಸ್ಥಿತಿಯಲ್ಲಿ ಇದೆ. ಈ ಬಗ್ಗೆ ಸರ್ಕಾರದ ಶಿಕ್ಷಣ ನೀತಿ ಏನು? ಭಾಷಾ ನೀತಿ ಏನು ಎನ್ನುವುದನ್ನು ನೀವು ಇವತ್ತು ಸ್ಪಷ್ಟಪಡಿಸಬೇಕು. ಇವತ್ತು ನೀವು ಈ ವಿಷಯದಲ್ಲಿ ಬಹಳ ಗೊಂದಲದಲ್ಲಿದ್ದೀರಿ. ಈ ರಾಜ್ಯದಲ್ಲಿ ಇವತ್ತು ಕನ್ನಡಿಗರಿಗೆ ರಕ್ಷಣೆ ಇಲ್ಲ. ಹೊರಗಡೆಯವರಿಗೆ ರಕ್ಷಣೆ ಇದೆ. ಅವರುಗಳ ಸಂಖ್ಯೆ ನೂರಾರು ಕಾಲೇಜುಗಳಲ್ಲಿ ಬೆಳೆಯುತ್ತಿದೆ ಎಂದು ಹೇಳಿದರೆ ಇದಕ್ಕಿಂತ ಉತ್ತಮವಾದ ನಿದರ್ಶನ ಬೇರೆ ಇಲ್ಲ. ಅದರ ಬಗ್ಗೆ ನಿಮ್ಮ ಸರ್ಕಾರದವರು ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ? ಏನು ನೀತಿಯನ್ನು ಹಾಕಿಕೊಂಡಿದ್ದಾರೆ ಎಂಬುದನ್ನು ತಾವು ಸ್ಪಷ್ಟಪಡಿಸಬೇಕು.

ಶ್ರೀ ಡಿ.ಮಂಜುನಾಥ್:- ಸರ್ಕಾರದ ನೀತಿ ಬಗ್ಗೆ ಯೋಚನೆ ಮಾಡುತ್ತೇವೆ. ಸಮಗ್ರ ಶಿಕ್ಷಣ ಮಸೂದೆಯನ್ನು 1983 ರಲ್ಲೇ ನಾವು ಅಂಗೀಕರಿಸಿ ಕೇಂದ್ರಕ್ಕೆ ಕಳುಹಿಸಿದ್ದೆವು. ಸುಮಾರು 10 ವರ್ಷವಾದ ಮೇಲೆ ಅದು ರಾಷ್ಟ್ರಪತಿಗಳಿಂದ ಅಂಗೀಕಾರ ಪಡೆದು ಬಂದಿತು. ದಿನಾಂಕ 1.6.1995 ರಿಂದ ಸದರಿ ಮಸೂದೆ ರಾಜ್ಯದಲ್ಲಿ ಜಾರಿಗೆ ಬಂದಿದೆ. ಅದರಲ್ಲಿ ಕೆಲವು ವಿಷಯಗಳು ಅಡಕವಾಗಿವೆ. ಅದರಲ್ಲಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು, ಭಾಷಾ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳು ಇವೆಲ್ಲಾ ಬರುತ್ತವೆ. ಈ ಶಿಕ್ಷಣ ಮಸೂದೆಯ ಕೆಲವೊಂದು ಪ್ರಾವಿಜನ್‌ನಿಂದ ನಮಗೆ ತೊಂದರೆಯಾಗುತ್ತಿದೆ ಎಂದು ಬಹಳ ಜನ ನಮಗೆ ಅರ್ಜಿಗಳನ್ನು ಕೊಡುತ್ತಿದ್ದಾರೆ. ಬಹುಶಃ ಶಿಕ್ಷಣ ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆಯಾಗುವಾಗ ನಾನು ಅದಕ್ಕೆ ಉತ್ತರ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ಕನ್ನಡ ಬಿಟ್ಟು ಎಲ್ಲಾ ಭಾಷೆಯ ಮಾಧ್ಯಮದ ಶಾಲೆಗಳಿಗೂ ಇಲ್ಲಿ ಪಾರಂಭಿಸಲು ಅವಕಾಶ ಕೊಡುತ್ತೀರಿ. ತಮಿಳಿಗೆ ಕೊಡುತ್ತೀರಿ; ತೆಲುಗು ಭಾಷೆಗೆ ಅನುಮತಿ ಕೊಡುತ್ತೀರಿ, ಮಲೆಯಾಳಂಗೆ ಅನುಮತಿ ಕೊಡುತ್ತೀರಿ, ಗುಜರಾತಿ ಭಾಷೆಗೆ ಅನುಮತಿ ಕೊಡುತ್ತೀರಿ. ಹೀಗೆ ಎಲ್ಲಾ ಭಾಷೆಯ ಶಾಲೆಗಳನ್ನು ಆರಂಭಿಸಲು ಅನುಮತಿ ಕೊಡುತ್ತೀರಿ. ಈ ತರಹದ ನೀತಿ ಬೇರೆ ಯಾವ ರಾಜ್ಯದಲ್ಲೂ ಇಲ್ಲ. ಇದು ಮನೆಗೆ ಮಾರಿ, ಪರರಿಗೆ ಉಪಕಾರಿ ಎನ್ನತಕ್ಕ ನೀತಿಯಾಗುತ್ತದೆ. ಈ ರೀತಿಯ ನೀತಿ ನಮಗೆ ಬೇಡ. ದಯವಿಟ್ಟು ಇದನ್ನು ಸ್ಪಷ್ಟಪಡಿಸಿ. ಈ ರಾಜ್ಯದ ಜನರಿಗೆ, ಕರ್ನಾಟಕದ ಕನ್ನಡಿಗರಿಗೆ ಎನ್ನತಕ್ಕಂತಹ ಒಂದು ನಿಲುವು ಇರಬೇಕಲ್ಲವೇ? ನೀವು ಇನ್ನೂ ನಾವು ನೀತಿ ಬಗ್ಗೆ ಚಿಂತನೆ ಮಾಡುತ್ತೇವೆ ಎಂದು ಹೇಳಿದರೆ, ನೀತಿಯೇ ಇಲ್ಲವೆಂದು ನಾವು ತೀರ್ಮಾನ ಮಾಡಬೇಕಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಸಮಗ್ರ ಶಿಕ್ಷಣ ಮಸೂದೆಗೂ, ಇದಕ್ಕೂ ಏನು ಸಂಬಂಧ ಇದೆ? ಶೇಕಡ ಇಷ್ಟು ಜನ ಕನ್ನಡಿಗರಿಗೆ ನೀವು ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯಲು ಅವಕಾಶ ಮಾಡಿಕೊಡದಿದ್ದರೆ ನಿಮ್ಮ ಶಿಕ್ಷಣ ಸಂಸ್ಥೆ ನಡೆಯುವುದಕ್ಕೆ ಬಿಡುವುದಿಲ್ಲ ಎಂದು ಅವರಿಗೆ ನಿರ್ದೇಶನ ಕೊಡಿ.

ಶ್ರೀ ಡಿ.ಮಂಜುನಾಥ್:- ಮಾನ್ಯ ಯಡಿಯೂರಪ್ಪನವರೇ, ಶೇಕಡ ಇಂತಿಷ್ಟು ಜನ ಕನ್ನಡಿಗರಿಗೆ ಪ್ರವೇಶಾವಕಾಶ ಕೊಡಬೇಕೆಂದು ನಿರ್ದೇಶನ ಕೊಟ್ಟಿದ್ದೇವೆ. ಅವರೂ ಅದನ್ನು ಪಾಲಿಸುತ್ತಿದ್ದಾರೆ. ಆ ರೀತಿ ನಡೆಯದಿರತಕ್ಕ ಪ್ರಕರಣಗಳು ಯಾವುದಾದರೂ ಇರುವುದು ನಮ್ಮ ಗಮನಕ್ಕೆ ಬಂದರೆ ನಾವು ಅವರ ಮೇಲೆ ಕ್ರಮ ಜರುಗಿಸುತ್ತೇವೆ. ಈಗ ಅವರನ್ನು ತೆಗೆದು ಹಾಕಿದ್ದಾರೆ ಎನ್ನುವುದಕ್ಕೆ ಕಾರಣ, ಆ ಬಗ್ಗೆ ಆದಳಿತ ನ್ಯಾಯ ಮಂಡಳಿಯಲ್ಲಿ ಕೇಸ್ ಬಾಕಿ ಇದೆ. ಅದಿನ್ನು ತೀರ್ಮಾನವಾಗಿಲ್ಲ. ಅದು ಅನುದಾನರಹಿತ ಸಂಸ್ಥೆ. ಅಂತಿಮವಾಗಿ ಕೋರ್ಟ್‌ನಲ್ಲಿ ಏನು ತೀರ್ಮಾನವಾಗುತ್ತದೆಯೋ ನೋಡೋಣ.

ಶ್ರೀ ಎಸ್.ಸುರೇಶ್ ಕುಮಾರ್:- ಮಾನ್ಯ ಅಧ್ಯಕ್ಷರೇ, ತಡೆಯಾಜ್ಞೆಯ ಒಂದು ನೆರಳಿನಲ್ಲಿ ಅವರು ಆ ಕಾಲೇಜ್ ಅನ್ನು ನಡೆಸುತ್ತಿದ್ದಾರೆ. ತಡೆಯಾಜ್ಞೆಯ ಹೆಸರಿನಲ್ಲಿ ಸರ್ಕಾರವೂ ಏನು ಕ್ರಮ ತೆಗೆದುಕೊಳ್ಳುತ್ತಿಲ್ಲ. ಇನ್ನೂ ಒಂಭತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ನಾವು ಪರ್ಮಿಷನ್ ಕೊಡಲಿಕ್ಕೆ ಹೊರಟಿದ್ದೇವೆ. ಅಂದರೆ ಇನ್ನೂ ಒಂಭತ್ತು ಕಡೆ ಈ ರೀತಿ ಶೋಷಣೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೇವೆ. ಅದಕ್ಕೆ ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ನ್ಯಾಯಾಲಯದಲ್ಲಿರತಕ್ಕ ಸರ್ಕಾರದ ಕಾನೂನು ವಿಭಾಗ ಯಾವುದೇ ರೀತಿ ಈ ಶಿಕ್ಷಕರಿಗೆ ಸಹಾಯ ಮಾಡುವ ರೀತಿಯಲ್ಲಿ ವರ್ತಿಸುತ್ತಿಲ್ಲ. ಈ ಬಗ್ಗೆ ಸರಿಯಾದ ಒಂದು ವಾದವನ್ನು ಸಂಬಂಧಪಟ್ಟವರು ನ್ಯಾಯಾಲಯದ ಮುಂದಿಡುತ್ತಿಲ್ಲ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನ್ಯಾಯಾಲಯದಲ್ಲಿ ಬೇಗ ಈ ವಿವಾದವನ್ನು ಪರಿಹರಿಸಿ ಶಿಕ್ಷಕರಿಗೆ ರಕ್ಷಣೆ ಕೊಡುತ್ತೀರಾ? ಇದಕ್ಕೆ ತಾವು ಮಾನ್ಯ ಸಚಿವರಿಂದ ಉತ್ತರ ಕೊಡಿಸಿ.

ಶ್ರೀ ಡಿ.ಮಂಜುನಾಥ್:- ಸದರಿ ಪ್ರಕರಣದಲ್ಲಿ ಶಿಕ್ಷಕರೇ ಕೋರ್ಟ್‌ಗೆ ಹೋಗಿದ್ದಾರೆ

ಶ್ರೀ ವಾಟಾಳ್ ನಾಗರಾಜ್:- ಮೂರು ಜನ ಶಿಕ್ಷಕರನ್ನು ಹೊರಗಡೆ ಹಾಕಿದ್ದಾರೆ. ಇದರಿಂದ ಕನ್ನಡ ಶಿಕ್ಷಕರಿಗೆ ಅನ್ಯಾಯವಾಗುತ್ತಿದೆ. ಈ ಕಾರಣದಿಂದ ಈ ಕಾಲೇಜ್ ಅನ್ನು ಬೇಗನೆ

ಮುಚ್ಚಬೇಕಾದ ವ್ಯವಸ್ಥೆ ಮಾಡಬೇಕು ಎನ್ನುವುದು ನನ್ನ ಒತ್ತಾಯವಾಗಿದೆ. ಇದು ಕನ್ನಡಿಗರಿಗೆ ಶೀಘ್ರವಾಗಿ ಆಘಾತ ಮಾಡತಕ್ಕ ಕಾಲೇಜ್. ಇದನ್ನು ಸಂಪೂರ್ಣವಾಗಿ ಮುಚ್ಚತಕ್ಕದ್ದು ಒಳ್ಳೆಯದು. ಅದು ಕಾಲೇಜೇ ಅಲ್ಲ. ಅದನ್ನು ತಾಂತ್ರಿಕ ಕಾಲೇಜು ಎಂದು ಹೇಳುತ್ತೀರಿ, ಆದರೆ ಅಲ್ಲಿ ಅದಕ್ಕೆ ಬೇಕಾದ ಯಾವ ಸೌಲಭ್ಯಗಳೂ ಇಲ್ಲ. ಆ ಕಾಲೇಜ್ ಕುಲಗೆಟ್ಟು ಹೋಗಿದೆ, ಅಧ್ವಾನ ಆಗಿದೆ. ಇದು ಇರತಕ್ಕ ಪರಿಸ್ಥಿತಿ.

ಅಧ್ಯಕ್ಷರು:- ಹೈಕೋರ್ಟಿನಲ್ಲಿ ಅಥವಾ ಇನ್ನಿತರ ನ್ಯಾಯಾಲಯಗಳಲ್ಲಿ, ಎಲ್ಲಿ ಈ ಪ್ರಕರಣದ ಬಗ್ಗೆ ವಿಚಾರಣೆ ನಡೆಯುತ್ತಿದೆ, ಅಲ್ಲಿ ಸರ್ಕಾರದ ಪರವಾಗಿ ಹಾಜರಾಗತಕ್ಕ ನಿಮ್ಮ ವಕೀಲರು ಯಾರಿದ್ದಾರೆ, ಅವರು ಅಪೇಕ್ಷಿಸಿದ ನಿಷ್ಠೆಯಿಂದ ಕೆಲಸ ಮಾಡುತ್ತಿಲ್ಲ ಎಂದು ಮಾನ್ಯ ಸುರೇಶ್‌ಕುಮಾರ್‌ರವರು ಹೇಳುತ್ತಿದ್ದಾರೆ. ಎಲ್ಲೂ ಒಂದು ಹಂತದಲ್ಲಿ ಇವರು ಅವರ ಜೊತೆ ಹೊಂದಿಕೊಂಡಿದ್ದಾರೇನೋ ಎನ್ನುವಂತಹ ಒಂದು ಅಭಿಪ್ರಾಯ ಬರುವ ರೀತಿಯಲ್ಲಿ ಅವರು ನಡೆದುಕೊಳ್ಳುತ್ತಿದ್ದಾರೆ. ಸದರಿ ಪ್ರಕರಣವು ತ್ವರಿತಗತಿಯಲ್ಲಿ ಇತ್ಯರ್ಥ ಆಗಬೇಕು ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಡಿ.ಮಂಜುನಾಥ್:- ಈ ಬಗ್ಗೆ ನಾನು ಉತ್ತರ ಹೇಳುತ್ತೇನೆ. ಅವರ ಸಂಸ್ಥೆಯನ್ನು ಡಿಸ್‌ಅಫಿಲಿಯೇಟ್ ಮಾಡುವ ಬಗ್ಗೆ ಅವರು ಕೋರ್ಟಿಗೆ ಹೋಗಿ ಸ್ಟೇ ಪಡೆದುಕೊಂಡಿದ್ದಾರೆ. ವಿಶ್ವವಿದ್ಯಾನಿಲಯವನ್ನು ಸದರಿ ಪ್ರಕರಣದಲ್ಲಿ ಪ್ರತಿವಾದಿಗಳಾಗಿ ಮಾಡಿದ್ದಾರೆ. ಈ ಬಗ್ಗೆ ನಾನು ಯೂನಿವರ್ಸಿಟಿ ಲೀಗಲ್ ಅಡ್ವೈಸರ್ ಅನ್ನು ಕರೆಯಿಸಿ, ಈ ಕೇಸ್ ಬೇಗ ಇತ್ಯರ್ಥಗೊಳಿಸಲು ಪ್ರಯತ್ನಿಸುವಂತೆ ಸೂಚಿಸುತ್ತೇನೆ. ನಾನು ಇಷ್ಟು ಮಾತ್ರ ಹೇಳಬಲ್ಲೆ.

ಅಧ್ಯಕ್ಷರು:- ಸದರಿ ಕೇಸ್‌ನಲ್ಲಿ ನ್ಯಾಯಾಲಯದಲ್ಲಿ ಎಷ್ಟು ಹಿಯರಿಂಗ್ಸ್ ಆಗಿವೆ? ನಿಮ್ಮ ಸರ್ಕಾರಿ ವಕೀಲರು ಏನು ಕೆಲಸ ಮಾಡಿದ್ದಾರೆ? ಅವರು ಸದರಿ ಕೇಸ್‌ನಲ್ಲಿ ಪ್ರಾಪರ್ ಅಪೀಯರೆನ್ಸ್ ಮಾಡಿದ್ದಾರೋ, ಇಲ್ಲವೋ otherwise you take steps against those Government Advocates to remove if they have not done their job.

ಶ್ರೀ ಡಿ.ಮಂಜುನಾಥ್:- ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್:- ಈ ಇಂಜಿನಿಯರಿಂಗ್ ಕಾಲೇಜಿಗೆ ನ್ಯಾಯಾಲಯದಲ್ಲಿ ಯಾವ ವಿಷಯಕ್ಕೆ ಸಂಬಂಧಿಸಿದಂತೆ ತಡೆಯಾಜ್ಞೆ ಸಿಕ್ಕಿದೆ? ಸ್ಟೇ ಆರ್ಡರ್ ಏನು ಎಂಬುದನ್ನು ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕು.

ಅಧ್ಯಕ್ಷರು:- ಈಗಾಗಲೇ ಈ ಪ್ರಶ್ನೆಗೆ ಹೆಚ್ಚಿನ ಸಮಯ ವ್ಯಯವಾಗಿದೆ. ಆದ್ದರಿಂದ ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಹಿರಿಯ ಸಚಿವರಾಗಿದ್ದಾರೆ, ಸತ್ಯ ಸಂಗತಿ ಏನು ಎಂಬುದು ಅವರಿಗೆ ಗೊತ್ತಿದೆ. ಅವರು ಪ್ರಶ್ನೆಗೆ ನೇರವಾದ ಉತ್ತರ ಕೊಟ್ಟಿದ್ದಲ್ಲಿ, ಸದರಿ ಪ್ರಶ್ನೆಯ ಬಗೆಗಿನ ಚರ್ಚೆ ಒಂದೇ ನಿಮಿಷದಲ್ಲಿ ಮುಕ್ತಾಯವಾಗುತ್ತಿತ್ತು.

ಶ್ರೀ ಎಸ್.ಸುರೇಶ್ ಕುಮಾರ್:- ಒಂದು ವರ್ಷದ ಹಿಂದೆ ಯೂನಿವರ್ಸಿಟಿಯವರು ಸದರಿ ಕಾಲೇಜನ್ನು ಡಿಸ್‌ಅಫಿಲಿಯೇಟ್ ಮಾಡಿದರು. ಆಗ ಸರ್ಕಾರ ಚಕಾರ ಕೂಡ ಎತ್ತಲಿಲ್ಲ. ಮಾನ್ಯ

ಮಂತ್ರಿಗಳು ಅವರು ಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ ಎಂದು ತಿಳಿಸಿದರು. ಆವರು ಏನು ತಡೆಯಾಜ್ಞೆ ತಂದಿದ್ದಾರೆ ಎಂಬುದನ್ನು ತಿಳಿಸಿ?

ಶ್ರೀ ಡಿ.ಮಂಜುನಾಥ್:- ಡಿಸ್‌ಅಫಿಲಿಯೇಟ್ ಮಾಡಬೇಕೆಂದು ಯೂನಿವರ್ಸಿಟಿಯವರು ಶಿಫಾರಸ್ಸು ಮಾಡಿದರು. ಅದರ ಮೇಲೆ ಸದರಿ ಸಂಸ್ಥೆಯವರು ಕೋರ್ಟಿಗೆ ಹೋಗಿದ್ದಾರೆ. ಅದಕ್ಕೆ ಕೋರ್ಟ್‌ನವರು ಸ್ಟೇ ಕೊಟ್ಟಿದ್ದಾರೆ. ಅದರಲ್ಲಿ ಯೂನಿವರ್ಸಿಟಿಯನ್ನೂ ಒಂದು ಪಾರ್ಟಿ ಮಾಡಿದ್ದಾರೆ. ಈ ಬಗ್ಗೆ ಸಂಬಂಧಿಸಿದ ಪ್ರಕರಣದ ಸರ್ಕಾರಿ ವಕೀಲರನ್ನು ಕರೆಯಿಸಿ, ಮಾತನಾಡಿ ಸದರಿ ಪ್ರಕರಣದಲ್ಲಿ ನೀಡಲಾಗಿರುವ ತಡೆಯಾಜ್ಞೆಯನ್ನು ತೆರವು ಮಾಡಿಸಲು ಏನು ಕ್ರಮಗಳನ್ನು ತೆಗೆದುಕೊಳ್ಳಬೇಕೋ, ಅವುಗಳನ್ನು ಮಾಡುತ್ತೇನೆ.

ಶ್ರೀ ವೈ.ರಾಮಕೃಷ್ಣ:- ಈಗ 50-60 ವರ್ಷಗಳಿಂದ, ಅಂದರೆ ಸ್ವರಾಜ್ಯ ಬರುವುದಕ್ಕೆ ಮುಂಚಿನಿಂದಲೂ ಜನರಲ್ ಇನ್ಸ್‌ಟಿಟ್ಯೂಷನ್ ಆಗಿದ್ದುದು 3-4 ವರ್ಷಗಳಿಂದೀಚೆಗೆ ಮೈನಾರಿಟಿ ಇನ್ಸ್‌ಟಿಟ್ಯೂಷನ್ ಎಂದು ವಿಧಾನಸೌಧದಲ್ಲಿ ನಿಮ್ಮ ಸೆಕ್ರೆಟರಿಗಳೇ ಆ ರೀತಿ ಕೊಡುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕುವುದಕ್ಕೆ ನಿಮಗೆ ಸಾಧ್ಯವಿಲ್ಲವೇ? ಉದಾಹರಣೆಗೆ, ಈಗ ನಮ್ಮ ಆನೇಕಲ್‌ನಲ್ಲಿ ವಲ್ಲಭಬಾಯಿ ಪಟೇಲ್‌ರವರ ಹೆಸರಿನಲ್ಲಿ ಹೈಸ್ಕೂಲ್ ಒಂದು ನಡೆಯುತ್ತಿತ್ತು, ಕಳೆದ ವರ್ಷ ಮೈನಾರಿಟೀಸ್ ಇನ್ಸ್‌ಟಿಟ್ಯೂಷನ್ ಎಂದು ಮಾಡಿದ್ದೀರಿ. ರೂಲ್ಸ್ ಆಫ್ ರಿಸರ್‌ವೇಷನ್ ಪ್ರೊಸೀಜರ್ ಅನ್ನು ಅವರು ಎಲ್ಲೂ ಕೂಡ ಅನುಸರಿಸುತ್ತಿಲ್ಲ. ಇದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಡಿ.ಮಂಜುನಾಥ್:- ಅದೊಂದೇ ಇನ್ಸ್‌ಟಿಟ್ಯೂಷನ್‌ಗೆ ಕೊಟ್ಟಿಲ್ಲ. ಬಹಳ ಇನ್ಸ್‌ಟಿಟ್ಯೂಷನ್‌ಗಳಿಗೆ ಕೊಟ್ಟಿದ್ದೇವೆ. ಹಿಂದೆ ಸರ್ಕಾರ ಈ ರೀತಿ ಕೊಟ್ಟಿದೆ. ಹಿಂದೆ ಕೊಟ್ಟಿರುವುದನ್ನು ವಾಪಸ್ ತೆಗೆದುಕೊಳ್ಳುವುದನ್ನು ಬೇಕಾದರೆ ಯೋಚನೆ ಮಾಡಬಹುದು.

ವಿಷಯ:- ಗೋಕಾಕ್ ತಾಲ್ಲೂಕಿನ ಸರ್ಕಾರಿ ಪ್ರೌಢಶಾಲೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 237(2058)

ಶ್ರೀ ಚಂದ್ರಶೇಖರ ನಾಯಕ್ (ಗೋಕಾಕ್):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಗೋಕಾಕ್ ತಾಲ್ಲೂಕಿನಲ್ಲಿರುವ ಸರಕಾರಿ ಪ್ರೌಢಶಾಲೆಗಳೆಷ್ಟು?

ಆ) ಹೊಸದಾಗಿ ಪ್ರಾರಂಭಿಸಬೇಕಾದ ಪ್ರೌಢಶಾಲೆಗಳ ಸಂಖ್ಯೆ ಎಷ್ಟು?

ಇ) ಈಗಿದ್ದ ಸರಕಾರಿ ಪ್ರೌಢಶಾಲೆಗಳಿಗೆ ಒದಗಿಸಿದ ಸರಕಾರಿ ಸ್ವಂತ ಕಟ್ಟಡಗಳೆಷ್ಟು?

ಈ) ವಿದ್ಯಾರ್ಥಿಗಳ ಹಾಜರಿ ಪ್ರಮಾಣಕ್ಕೆ ಈಗಿರುವ ಕಟ್ಟಡಗಳ ಸ್ಥಳಾವಕಾಶ ಸರಿಯಾಗಿದೆಯೇ?

ಉ) ಎಲ್ಲಾ ಶಾಲೆಗಳಲ್ಲಿದ್ದ ಶಿಕ್ಷಕರ ಸಂಖ್ಯೆ ಎಷ್ಟು? ಖಾಲಿ ಇರುವ ಸ್ಥಾನಗಳೆಷ್ಟು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):-

ಅ) 13

ಆ) ನಿರ್ಧರಿಸಬೇಕಾಗಿದೆ.